ದಿನಾಂಕ: ಜನವರಿ 10, 2014

# ಆಡಳಿತ ನಿರ್ವಹಣೆ ಕುರಿತು ಭಾಜಪದ ಪ್ರಭುದ್ಧ ಚಿಂತನೆಗಾಗಿ ದೇಶ ಕಾದಿದೆ

**ಅರುಣ್ ಜೇಟ್ಲಿ**

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ರಾಜ್ಯ ವಿಧಾನ ಸಭೆ ಚುನಾವಣೆಗಳ ಫಲಿತಾಂಶ ಹೊರಬಿದ್ದು ಒಂದು ತಿಂಗಳು ಮುಗಿದಿದೆ. ಅಂದಿನಿಂದ ರಾಷ್ಟ್ರ ರಾಜಕಾರಣದ ಚಿಂತನೆಯಲ್ಲಿ ವ್ಯಾಪಕ ಬದಲಾವಣೆಗಳು ಸಂಭವಿಸಿವೆ.

ನರೇಂದ್ರ ಮೋದಿಯವರನ್ನು ಭಾಜಪ ಪ್ರಧಾನ ಮಂತ್ರಿ ಅಭ್ಯರ್ಥಿಗಳೆಂದು ಘೋಷಿಸಿದ ದಿನಾಂಕ ಅಂದರೆ 13 ಸೆಪ್ಟೆಂಬರ್ 2013ರ ಮುನ್ನ ತಮ್ಮ ಸಂಘಟನೆ ಸುಸ್ಥಿರಗೊಳ್ಳುವಲ್ಲಿ ಮತ್ತು ಪ್ರಧಾನ ಮಂತ್ರಿ ಅಭ್ಯರ್ಥಿಯನ್ನು ಘೋಷಿಸುವಲ್ಲಿ ಭಾಜಪ ಸಾಮರ್ಥ್ಯದ ಕುರಿತು ಸಂದೇಹಗಳನ್ನು ವ್ಯಕ್ತಪಡಿಸಲಾಗುತ್ತಿತ್ತು. ನರೇಂದ್ರ ಮೋದಿಯವರ ಹೆಸರು ಘೋಷಿಸಿದ ನಂತರ ಮೋದಿಯವರಿಗೆ ವ್ಯಾಪಕ ಬೆಂಬಲ ಒದಗಿ ಬಂದಿದೆ. ಪಕ್ಷದ ಕಟ್ಟಾಳುಗಳು ಮತ್ತು ಬೆಂಬಲಿಗರಲ್ಲಿ ಹುಮ್ಮಸ್ಸು ಮನೆಮಾಡಿದೆ. ಪ್ರಧಾನ ಮಂತ್ರಿ ಅಭ್ಯರ್ಥಿಯಾಗಿ ಅವರ ವೈಯಕ್ತಿಕ ಜನಪ್ರಿಯತೆ ಪ್ರಮಾಣ ಎಲ್ಲಾ ಹಿಂದಿನ ದಾಖಲೆಗಳನ್ನು ಮೀರಿದೆ. ವಿಧಾನ ಸಭೆ ಚುನಾವಣೆಗಳ ಫಲಿತಾಂಶ ಡಿಸೆಂಬರ್ 8, 2013ರಂದು ಪ್ರಕಟವಾದ ನಂತರ ಮೋದಿ ಹಾಗೂ ರಾಹುಲ್ ಅವರ ನಡುವೆ ತುಲನಾತ್ಮಕ ಚಿಂತನೆ ಹೆಚ್ಚಿದೆ. ಮೋದಿ ಹಾಗೂ ಭಾಜಪ ನಿಚ್ಚಳ ಮುನ್ನಡೆ ಸಾಧಿಸಿವೆ. ದೆಹಲಿ ಚುನಾವಣೆಯಲ್ಲಿ ಆಮ್ ಆದ್ಮಿ ಪಾರ್ಟಿ ಹೊಸ ಪ್ರತಿಸ್ಪರ್ಧಿಯಾಗಿ ಹೊರಹೊಮ್ಮಿದೆ. ಕಳೆದ ಒಂದು ತಿಂಗಳಲ್ಲಿ ಆಮ್ ಆದ್ಮಿ ಪಾರ್ಟಿ ಮಾಧ್ಯಮ ಹಾಗೂ  ಬಹುಪಾಲು ಜನಸಾಮನ್ಯರ ಗಮನ ಸೆಳೆದಿದೆ. ಸಂಘರ್ಷದ ರೂಪದಲ್ಲಿ ಆ ಪಕ್ಷ ಜನ್ಮತಾಳಿದೆ. ಪಕ್ಷದ ವೇದಿಕೆಯಿಲ್ಲದೆ ಚುನಾವಣೆ ಎದುರಿಸಿದ ಹಲವಾರು ರಾಜಕೀಯ ಆಕಾಂಕ್ಷಿಗಳು ಹೊಸ ಪಕ್ಷ ಸೇರಲು ಸರದಿ ಸಾಲಿನಲ್ಲಿ ನಿಂತಿದ್ದಾರೆ. ಪಕ್ಷಕ್ಕೆ ಸೇರಿದ ಕೆಲವಾರು ಮುತ್ಸದ್ದಿಗಳಿಗೆ ಹಿಂದೆ ದೊರೆತ ಮತಗಳಿಗಿಂತಲೂ ಹೆಚ್ಚಿನ ಪ್ರಚಾರ ದೊರೆಯುತ್ತಿದೆ. ಇಂದು, ತಮ್ಮ ಆಕಾಂಕ್ಷೆ ಈಡೇರಿಸಲು ಅವರಿಗೆ ಹೊಸ ವೇದಿಕೆ ದೊರೆತಿದೆ.

ಫಲಿತಾಂಶ ಹೊರಬಂದ ನಂತರ ದೆಹಲಿಯ ಎಎಪಿ ಸರ್ಕಾರದ ಸಾಧನೆ ಅತ್ಯುತ್ಸಾಹದಿಂದ ಕೂಡಿದೆ. ದೆಹಲಿಯನ್ನು ಜಾಗತಿಕ ನಗರಿಯಾಗಿ ಪರಿವರ್ತಿಸುವ ಯಾವುದೇ ಆಲೋಚನೆ ಅದಕ್ಕಿಲ್ಲ. ಆದರೆ ದೆಹಲಿ ಚಟುವಟಿಕೆಗಳು ಕೇವಲ ವಾಹನದಲ್ಲಿ ಸಂಚರಿಸುವುದಕ್ಕೆ, ಸರ್ಕಾರಿ ಬಂಗಲೆ ಪಡೆಯುವದಕ್ಕೆ, ಜನಸಾಮಾನ್ಯರಿಗೆ ಉಚಿತ ಕೊಡುಗೆ ಹಂಚುವುದಕ್ಕೆ ಹಾಗೂ ಜನರು ಟೀಕಿಸುವುದಕ್ಕೆ ಮತ್ತು ಮಾಧ್ಯಮದವರ ಸಂಪೂರ್ಣ ಗಮನ ಸೆಳೆಯುವ ಚಟುವಟಿಕೆಗಳಿಗೆ ಮುಡುಪಾಗಿದೆ. ಕೆಲವಾರು ಸಾಂಕೇತಿಕ ಕಾರ್ಯಕ್ರಮಗಳು ಮುಖ್ಯವೆನಿಸಬಹುದು ಆದರೆ ಅದರಿಂದ ಸಾಮಾನ್ಯ ಜನರ ಜೀವನ ಗುಣಮಟ್ಟ ಸುಧಾರಿಸದು. ಇಂತಹ ಉಪಾಯಗಳು ಶಾಶ್ವತ ಪರಿಹಾರ ನೀಡುವುದಿಲ್ಲ. ಆದರೂ, ತಾತ್ಕಾಲಿಕವಾಗಿ ಈ ಹೊಸ ಸಂಘಟನೆಗೆ ದೇಶದ ಹಲವು ಭಾಗಗಳಲ್ಲಿ ಅವಕಾಶವಿರುವ ಅಂಶವನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

ಭ್ರಷ್ಟಾಚಾರ ವಿಚಾರಧಾರೆಯನ್ನು ಬದಲಿಸುವ ಪ್ರಯತ್ನವನ್ನು ಎಎಪಿ ಮಾಡುತ್ತಿದೆ. ಕಾಂಗ್ರೆಸ್ ಪಕ್ಷಕ್ಕೆ ಮುಜುಗರ ತರುವಂತಹ ಭ್ರಷ್ಟಾಚಾರ ಆರೋಪಗಳ ಕುರಿತು ಅದು ಪ್ರಸ್ತಾಪಿಸುವಲ್ಲಿ ಅಳುಕುತ್ತಿದೆ. ಸಿಡಬ್ಲ್ಯುಜಿ ತರಂಗಾಂತರ ಹಂಚಿಕೆ, ಕಲ್ಲಿದ್ದಲು ನಿಕ್ಷೇಪ ಹಂಚಿಕೆ ಅಥವಾ ಶೀಲ

ದೀಕ್ಷಿತ್ ಸರ್ಕಾರದ ಭ್ರಷ್ಟಾಚಾರ ಪ್ರಕರಣಗಳ ಕುರಿತು ಹೇಳಿಕೆ ನೀಡುತ್ತಿಲ್ಲ. ಕೇವಲ ಸಣ್ಣ ಪುಟ್ಟ ಭ್ರಷ್ಟಾಚಾರ ಪ್ರಕರಣಗಳತ್ತ ಜನರ ಗಮನವನ್ನು ವಿಚಲಿತಗೊಳಿಸುತ್ತಿದೆ.

ಕೇವಲ ಕೆಲವೇ ಕೆಲವು ಮಾದರಿಗಳು ಮತ್ತು ಸೀಮಿತ ವರ್ಗಗಳ ಕೆಲವಾರು ಜನರ ಅನಿಸಿಕೆಯನ್ನು ಆಧರಿಸಿ ಅಗ್ರಮಾನ್ಯ ಪತ್ರಿಕೆಯೊಂದು ಸಮೀಕ್ಷೆ ವರದಿ ಮಾಡಿದೆ. ಸಮೀಕ್ಷೆ ಮೂರು ಸಂದೇಶಗಳನ್ನು ನೀಡುತ್ತದೆ. ಅವುಗಳಲ್ಲಿ ಮೊದಲನೆಯದು, ಲೋಕ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪ್ರದರ್ಶನ ಕಳಪೆಯಾಗಿರುತ್ತದೆ ಎಂದು ತಿಳಿಸಿದೆ. ಎರಡನೆ ಸಂದೇಶ ಎಎಪಿ ಪಕ್ಷ ತನ್ನ ಉಪಸ್ಥಿತಿಯ ಪರಿಚಯ ನೀಡಲಿದೆ ಎಂದಿದೆ. ಮೂರನೆಯದಾಗಿ, ಪ್ರಧಾನ ಮಂತ್ರಿ ಸ್ಥಾನಕ್ಕೆ ಮೋದಿಯವರ ಆಯ್ಕೆಯು ವ್ಯಾಪಕ ರಾಷ್ಟ್ರ ಮನ್ನಣೆಗಳಿಸಿದೆ ಎಂದು ಕಂಡುಕೊಂಡಿದೆ.

ಭಾಜಪ ಮುಂದಿರುವ ಸವಾಲೆಂದರೆ ಗಳಿಸಿದ ಮುನ್ನಡೆಯನ್ನು ಬಲಪಡಿಸುವುದು. ಪಕ್ಷದ ಅಭ್ಯರ್ಥಿಗಳು ಮತ್ತು ಸಂಘಟನೆಯ ಸ್ವರೂಪವು ತನ್ನ ವಿಶ್ವಾಸಾರ್ಹತೆಯ ಮೂಲಕ ಭರವಸೆ ಮೂಡಿಸಬೇಕಾಗಿದೆ. ಕಾಂಗ್ರೆಸ್ ಪಕ್ಷಕ್ಕೆ ಭಾರಿ ಹಿಂಜರಿಕೆಯಾಗುತ್ತದೆ, ಭಾಜಪ ಅಗ್ರಸ್ಥಾನ ಪಡೆಯಲಿದೆ. ತನ್ನ ಚಟುವಟಿಕೆಗಳ ವೇಗ ಹೆಚ್ಚಿಸಿ, ಪ್ರತಿಯೊಂದು ಮನೆಗಳಿಗೂ ಪ್ರವೇಶ ಮಾಡಬೇಕಾಗಿದೆ. ಪ್ರಧಾನ ಮಂತ್ರಿಯಾಗಿ ಮೋದಿ ಎಂಬ ಪ್ರಚಾರದೊಂದಿಗೆ ಭಾರತದ ಅಭ್ಯುದಯದ ಉದ್ದೇಶಗಳು ಸೇರಬೇಕಾಗಿದೆ. ಆ ಉದ್ದೇಶಗಳು ನಿಖರ ಸ್ವರೂಪದ್ದಾಗಿರಬೇಕು, ಸ್ಪಷ್ಟವಾಗಿರಬೇಕು ಮತ್ತು ಪ್ರಭುದ್ಧ ಚಿಂತನೆಯಿಂದ ಕೂಡಿರಬೇಕು. ಸಣ್ಣ ಪುಟ್ಟ ಭ್ರಷ್ಟಾಚಾರ ಪ್ರಕರಣಗಳತ್ತ ಸಂಕುಚಿತ ದೃಷ್ಟಿಕೋನ ಬೀರುವ ಹೊಸ ಪಕ್ಷಗಳನ್ನು ನಿಸ್ತೇಜಗೊಳಿಸುವ ಸಾಮರ್ಥ್ಯ ಪ್ರಭುದ್ದ ಚಿಂತನೆಗಿದೆ. ಕಾಂಗ್ರೆಸ್ ಪಕ್ಷದ ಇತ್ತೀಚಿನ ನಡಿಗೆ ಅಹಂಕಾರದಿಂದ ಆರಂಭಗೊಂಡು ಅವಸಾನದತ್ತ ಸಾಗಿದೆ. ಈ ಹಿಂದೆ ಎಂದಿಗೂ ಕಾಂಗ್ರೆಸ್ ಪಕ್ಷದ ಪ್ರಧಾನ ಮಂತ್ರಿ ಅಭ್ಯರ್ಥಿಯ ಮಾನದಂಡ ಈ ಮಟ್ಟಕ್ಕೆ ಕುಸಿದಿರಲಿಲ್ಲ. ಆ ಪಕ್ಷದ ಹಿರಿಯ ನಾಯಕರು ಹತಾಶರಾಗಿದ್ದಾರೆ. ದೆಹಲಿಯಲ್ಲಿ ಎಎಪಿ ಪಕ್ಷಕ್ಕೆ ಬೆಂಬಲ ನೀಡುವ ತಂತ್ರಗಾರಿಕೆ ಮೂಲಕ ಕಾಂಗ್ರೆಸ್ ಪಕ್ಷ ತನ್ನ ಮತಕ್ಷೇತ್ರಗಳನ್ನು ಅವರ ಕೈಗೆ ಒಪ್ಪಿಸಿದಂತಾಗಿದೆ. ಲೋಕಸಭೆಯಲ್ಲಿ ತನ್ನ ಬಲಾಬಲ ಯಾವುದೇ ರಾಜ್ಯದಲ್ಲಿ ಹೆಚ್ಚಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಕಾಂಗ್ರೆಸ್ ಪಕ್ಷಕ್ಕೆ ನಿರ್ಮಾಣವಾಗಿದೆ. ಅದಕ್ಕೆ ಅಂತಿಮವಾಗಿ ಲಭಿಸುವ ಸ್ಥಾನಗಳನ್ನು ಕಂಡು ಎಲ್ಲರೂ ಬೆರಗಾಗಬಹುದು.

ಭಾಜಪ ವಿರೋಧಿ ಕಾರ್ಯಕರ್ತರ ಸಮೂಹ ಕಾಂಗ್ರೆಸ್ ಪಕ್ಷದ ಕುರಿತು ತನ್ನ ವಿಶ್ವಾಸ ಕಳೆದುಕೊಂಡಿದೆ. ಹೊಸ ರಾಜಕೀಯ ಸಂಘಟನೆಯತ್ತ ಅವರ ಚಿತ್ತ ತಿರುಗಿದೆ. ಕಾಂಗ್ರೆಸ್ ಅವನತಿಯ ಲಾಭ ಯಾರಿಗೆ? ಭಾಜಪ ಪಕ್ಷದಲ್ಲಿ ನಮಗೆ ಲಭಿಸಿದ ಅಪರೂಪದ ಅವಕಾಶ ಇದಾಗಿದೆ. ನರೇಂದ್ರ ಮೋದಿಯಲ್ಲಿ ಭಾಜಪ ಬಹು ಯೋಗ್ಯನಾದ ಎಲ್ಲರ ಒಪ್ಪಿಗೆಗೆ ಪಾತ್ರರಾದ ಅಭ್ಯರ್ಥಿಯನ್ನು ಕಂಡಿದ್ದೇವೆ. ಪಕ್ಷ ಹಾಗೂ ಅದರ ನಾಯಕರು ಇನ್ನು ಪ್ರಭುಧ್ಧ ಚಿಂತನೆಯ ಭವಿಷ್ಯದ ಉದ್ದೇಶಗಳನ್ನು ಭಾರತದ ಜನತೆಗೆ ತಿಳಿಸಬೇಕಾಗಿದೆ.